**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 373/2025

ಸಿ ಡಬ್ಲುಃ 11

ಪಿ ಡಬ್ಲುಃ 6

| | |
|---|---|
| ಸಾಕ್ಷಿದಾರರ ಹೆಸರು | ಕಿರಣ್ |
| ತಂದೆಯ ಹೆಸರು | ಮಂಗೇಶ್ ವೈದ್ಯ |
| ವಯಸ್ಸು | 47 |
| ಉದ್ಯೋಗ | ಎ ಎಸ್ ಐ ಮಂಕಿ ಪಿ ಎಸ್ |
| ವಾಸ್ತವ್ಯ | ಮಂಕಿ |

ಸಾಕ್ಷಿಯನ್ನು ದಿನಾಂಕ **07-04-2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ನಾನು, 2024 ಇಲ್ಲಿಯವರೆಗೂ ಮಂಕಿ ಪೋಲಿಸ್ ಠಾಣೆಯಲ್ಲಿ ಎ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10-01-2025 ರಂದು ಮಂಜು ನಾಗಪ್ಪ ಗೌಡ ಚಾಸಾ1 ರವರು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ನೀಡಿದ ದೂರಿನಂತೆ ದೂರನ್ನು ಸ್ವೀಕರಿಸಿ, ಠಾಣಾ ಎನ್ ಸಿ ನಂ. 1/2025 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಮತಿಗಾಗಿ ನಿವೇದಿಸಿಕೊಂಡಿರುತ್ತೇವೆ. ಮಾನ್ಯ ನ್ಯಾಯಾಲಯವು ಅದೇ ದಿವಸ ಅನುಮತಿ ನೀಡಿರುತ್ತದೆ. ಚಾಸಾ10 ರವರು ಪ್ರಕರಣ ದಾಖಲಿಸಿಕೊಂಡು, ದಿಃ 11-01-2025 ರಂದು ಆ ಪ್ರಕರಣದ ಕಡತವನ್ನು ಸ್ವೀಕರಿಸಿ, ಪಂಚನಾಮೆಯನ್ನು ದಿಃ 11-01-2025 ರಂದು ಘಟನಾ ಸ್ಥಳವಾದ ಹೊಳ್ಳಕುರಿಗೆ ಭೇಟಿ ನೀಡಿ ಚಾಸಾ1 ರವರು ತೋರಿಸಿರುವ ಘಟನಾ ಸ್ಥಳವನ್ನು ಚಾಸಾ2 ಮತ್ತು 3 ರವರ ಸಮಕ್ಷಮದಲ್ಲಿ ವಿವರವಾದ ಪಂಚನಾಮೆಯನ್ನು ಬೆಳಗ್ಗೆ 11-30 ಗಂಟೆಯಿಂದ 12-30 ಗಂಟೆಯ ಅವಧಿಯಲ್ಲಿ ತಯಾರಿಸಿ, ಛಾಯಚಿತ್ರ ತೆಗೆಸಿರುತ್ತೇನೆ.

2. ಸಾಕ್ಷಿದಾರರಾದ ಚಾಸಾ4 ರಿಂದ 6 ರವರ ಹೇಳಿಕೆಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಆಪಾದಿತರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ದಿಃ 18-01-2025 ರಂದು ಭೂ ದಾಖಲೆಗಳ ನಿರ್ದೇಶಕರಿಗೆ ಘಟನಾ ಸ್ಥಳದ ದಾಖಲಾತಿಯನ್ನು ಒದಗಿಸಲು ನಿವೇದಿಸಿಕೊಂಡಿರುತ್ತೇನೆ. ನಂತರ ಅವರಿಂದ ದಿಃ 29-01-2025 ರಂದು ಮಾಹಿತಿಯನ್ನು

ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಚಾಸಾ8 ಮತ್ತು 9 ರವರು ನೀಡಿದ 63(4)(ಸಿ) ಬಿ ಎಸ್ ಎ ಅಡಿಯಲ್ಲಿ ನೀಡಿದ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಎಲ್ಲಾ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ3 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ4 ನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ8 ಮತ್ತು 9 ರವರು 63(4)(ಸಿ) ಬಿ ಎಸ್ ಎ ಅಡಿಯಲ್ಲಿ ನೀಡಿದ ಪ್ರಮಾಣ ಪತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಅನುಕ್ರಮವಾಗಿ **ನಿಪಿ.7 ರಿಂದ 9** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.7(ಎ), 8(ಎ) ಮತ್ತು 9(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಇವರಿಗೆ ನೀಡಿದ ನಿವೇದನೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ.10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.10(ಎ)** ಎಂದು, ಸಾಕ್ಷಿಯು ದಿಃ 29-01-2025 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.11** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.11(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಆರ್ ಎನ್ ವಕೀಲರಿಂದಃ**

ಘಟನಾ ಸ್ಥಳದ ಉತ್ತರಕ್ಕೆ ಸುಮಾರು 30 ಅಡಿ ಅಂತರದಲ್ಲಿ ಫಿರ್ಯಾದಿ ಮನೆ ಇತ್ತು. ಪಂಚನಾಮೆಯ ಪೂರ್ವದಲ್ಲಿ ನಾನು ಘಟನಾ ಸ್ಥಳಕ್ಕೆ ಹೋಗಿ ಬಂದಿದ್ದು ಇರುವುದಿಲ್ಲ. ಘಟನಾ ಸ್ಥಳವನ್ನು ಫಿರ್ಯಾದಿದಾರರು ತೋರಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿಗೆ ತಾಗಿಕೊಂಡಿರುವ ಕಚ್ಚಾ ರಸ್ತೆಯನ್ನು ಫಿರ್ಯಾದಿಯು ತೋರಿಸಿರುತ್ತಾರೆ. ಪಂಚನಾಮೆ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಘಟನಾ ಸ್ಥಳದಲ್ಲಿ ಏನೂ ಕುರುಹು ಇದ್ದದ್ದು ಇರುವುದಿಲ್ಲ. ಘಟನಾ ಸ್ಥಳದಲ್ಲಿ ನಾನು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಹೇಳಿಕೆಯಲ್ಲಿ ತೋರಿಸಿದ ಚಾಸಾ4 ರಿಂದ 6 ರವರು ಪ್ರತ್ಯಕ್ಷ ಸಾಕ್ಷಿದಾರರಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿ. ಆ ದಿವಸ ಅಲ್ಲಿ ಯಾವುದೇ ಘಟನೆ ನಡೆದದ್ದು ಇಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**